Construction of Bus Stand at Zalki Circle, Bijapur District.

6 SRI S.S. ARAKERI (Ballolli)—Will the Minister for Transport and Minor Irrigation be pleased to state.—

(a) the total estimated cost for the proposed construction of Bus Stand at Zalki Circle, Indi Taluk, Bijapur District;

(b) when actual construction of the Bus Station will be commenced;

(c) the reasons for delay?

SRI M.M. J. SADYOJATHA. (Minister for transport and Minor Irrigation).—

(a) The work is administratively approved for Rs. 2,00,000

(b) Estimates and Plans have been received from the Executive Engineer K.S.R.T.C. Civil Engineering Division, Gulbarga. After scrutiny and technical sanction to the Estimates, tenders will be invited to finalise the Agency to take up the construction work.

(c) Due to late receipt of the scheduled rates for 1979-80 from the Public Works Department.

ಶ್ರೀ ಎಸ್.ಎಸ್. ಅರಕೇರಿ.—ಸ್ವಾಮಿ, ಇಂಡಿ ತಾಲ್ಲೂಕಿನ ಜಲ್ಲಿ ವಲಯದಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಿಸುವ ಕೆಲಸ ಸುಮಾರು ೩೦ ವರ್ಷಗಳಿಂದಲೂ ಆಗುತ್ತಿದೆ. ನ್ಯಾಷನಲ್ ಹೈವೇ ರಸ್ತೆಗಳು ಮತ್ತೆ ಸ್ಟೇಟ್ ಹೈವೇ ರಸ್ತೆಗಳು ನಾಲ್ಕು ರಸ್ತೆಗಳೂ ಅಲ್ಲಿ ಕೂಡುತ್ತವೆ. ಸುಮಾರು ೮ ತಿಂಗಳ ಹಿಂದೆ ೬ ಲಕ್ಷ ರೂಪಾಯಿಗಳ ಅಂದಾಜು ಮಾಡಿದ್ದೇವೆಂದು ಹಿಂದಿನ ಸಾರಿಗೆ ಮಂತ್ರಿಯವರು ತಿಳಿಸಿದ್ದರು. ಈಗ ೨ ಲಕ್ಷ ರೂಪಾಯಿಗಳು ಅಂತ ಉತ್ತರದಲ್ಲಿ ತಿಳಿಸಿದ್ದೀರಿ. ಆದ್ದರಿಂದ ಇದರಲ್ಲಿ ಯಾವುದು ನಿಜಾಂಶ ಅಂತ ನಾವು ತಿಳಿದುಕೊಳ್ಳಬೇಕು.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗ ಉತ್ತರ ಕೊಟ್ಟಿರತಕ್ಕದ್ದು ನಿಜಾಂಶ.

ಶ್ರೀ ಎಸ್. ಎಸ್. ಅರಕೇರಿ.—ಅಧ್ಯಕ್ಷರೇ ಹಿಂದಿನ ಸಾರಿಗೆ ಮಂತ್ರಿಯವರು ೬ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದೇವೆಂದು ತಿಳಿಸಿದ್ದರು, ತಾವು ೨ ಲಕ್ಷ ರೂಪಾಯಿಗಳು ಅಂತ ತಿಳಿಸಿದ್ದೀರಿ ಇದರಲ್ಲಿ ಅಂಕಿಅಂಶಗಳು ಏನಾದರೂ ತಪ್ಪಾಗಿದೆಯೇ

ಶ್ರೀ ಎಂ. ಎಂ. ಜೆ. ಸದ್ಯೋಜಾತ. ೬ ಲಕ್ಷ ರೂಪಾಯಿಗಳು ಅಂತ ಅಂದಿನ ಮಂತ್ರಿಯವರು ಉತ್ತರ ಕೊಟ್ಟಿದ್ದರೆ, ನಾನು ಈ ಬಗ್ಗೆ ವಿಚಾರ ಮಾಡಿಸಿ ೬ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಲಿಕ್ಕೆ ಆದೇಶ ನೀಡುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಇನ್ನು ನನ್ನ ಎರಡನೆಯ ಪ್ರಶ್ನೆಗೆ ತಾಂತ್ರಿಕ ಒಪ್ಪಿಗೆ ಸಿಕ್ಕಿದೆ, ಗುಲ್ಬರ್ಗ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಟೆಂಡರ್ ಕರೆದು ಅಂತಿಮವಾಗಿ ಈ ಕೆಲಸವನ್ನು ತೆಗೆದುಕೊಳ್ಳುತ್ತಾರೆಂದು ತಿಳಿಸಿದ್ದೀರಿ. ಟೆಂಡರ್ ಕರೆಯಲಿಕ್ಕೆ ಎಷ್ಟು ದಿವಸ ಬೇಕು. ನಾನು ಎಂ. ಎಲ್. ಎ. ಇದ್ದಾಗ ಈ ಕೆಲಸ ಮುಗಿಯುತ್ತದೆಯೇ ಸ್ವಾಮಿ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಇದರ ಬಗ್ಗೆ ಟೆಂಡರ್ ಇನ್‌ವೈಟ್ ಮಾಡಲಿಕ್ಕೆ ಈಗಾಗಲೇ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಡೈರೆಕ್ಷನ್ ಕೊಡಲಾಗಿದೆ.

ಶ್ರೀ ಎಸ್. ಎಸ್. ಅರಕೇರಿ,—ಅವರು ಎಷ್ಟು ದಿವಸದಲ್ಲಿ ಟೆಂಡರ್ ಕರೆಯುತ್ತಾರೆ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಆದಷ್ಟು ಬೇಗ ಮಾಡಿಲಿಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಶ್ರೀ ಎಸ್. ಎಸ್, ಅರಕೇರಿ.—ಈ ಬಸ್‌ನಿಲ್ದಾಣದ ಎಸ್ಟಿಮೇಟ್ ೬ ಲಕ್ಷ ರೂಪಾಯಿಗಳು ಇದು ಈ ವರ್ಷದ ಬಡ್ಜೆಟ್ ಪ್ರಪೋಸಲ್‌ನಲ್ಲಿ ಸೇರಿದೆಯೇ ಹಾಗೆ ಸೇರದಿದ್ದರೆ? ಇದನ್ನು ಸೇರಿಸುತ್ತೀರಾ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಸೇರಿದೆ. Within 15 days it will be taken up.

Formation of roads in Shahabad revenue Circles

21 SRI S. F. BHAIRI (Shahabad) - SRI B.V. KAKKILAYA (Vittal) SRI PAMPATHI (Davanagere)—Will the Chief Minister be pleased to state.—

(a) the number of roads taken up for formation in Nalwar. Farutabad. Shahabad revenue Circles for Gulbarga District in the year 1978-79;

(b) the number of roads taken up for improvement in the above circles in the year 1978-79;

(c) the number of bridges approved for construction in the above in the year 1978-79?

SRI R. GUNDU RAO, (Chief Minister)—

(a) (i) No new formation of roads has been taken up in Nalwar and Shahabad revenue Circle in the year 1978-79.

(ii) In Farutabad revenue Circle one road formation work has been taken up.

(b) During the year 1978-79, 17 roads were taken for improvement as detailed below:—

(i) 7 road works in Nalwar revenue circle;

(ii) 9 road works in Shahabad revenue circle:

(iii) 1 road work Farutabad revenue circle.

(c) (i) During 1978-79, construction of one bridge work is approved and it is in progress in Nalwar revenue circle.

(ii) No new bridge Construction work is approved in Shahabad and Farutabad revenue circles.

ಶ್ರೀ ಎಸ್. ಎಫ್. ಭೈರಿ.— ಅಧ್ಯಕ್ಷರೇ ನನ್ನ ಮೊದಲನೆಯ ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಯವರು ನಲವಾರ, ಹಾಗೂ ಶಹಬಾದ್ ವಲಯಗಳಲ್ಲಿ ಹೊಸ ರಸ್ತೆಗಳನ್ನು ರಚಿಸಲಾಗಿಲ್ಲ ಅಂತ ಉತ್ತರ ಹೇಳಿದ್ದಾರೆ. ಅವು ಹಿಂದೆ ಶ್ರೀ ದೇವೇಂದ್ರಪ್ಪ ಘಾಳಪ್ಪ ಅವರು ಪಿ.ಡಬ್ಲ್ಯೂ.ಡಿ. ಮಂತ್ರಿಗಳಾಗಿದ್ದಾಗ ಸ್ಯಾಂಕ್ಷನ್ ಆದ ರಸ್ತೆಗಳು. ಅವುಗಳನ್ನು ಏತಕ್ಕೆ ರಚಿಸಲಾಗಲಿಲ್ಲ?

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೇ, ಮಾನ್ಯ ಸದಸ್ಯರು ಎಕ್ಸ್‌ಗ್ರೇಷಿಯ ಗ್ರಾಂಟ್ಸ್‌ನಲ್ಲಿ ಮಾಡಿಕೊಡುತ್ತೇವೆ ಎಂದು ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು ಅಂತ ಹೇಳುತ್ತಾರೆ. ನಮಗೆ ತಿಳಿದಂತೆ ಅದು ಕಂಡುಬರುವುದಿಲ್ಲ. ಈ ವಿಚಾರ ಇದ್ದರೆ ಪರಿಶೀಲನೆ ಮಾಡೋಣ. ಎಕ್ಸ್‌ಗ್ರೇಷಿಯ ಗ್ರಾಂಟ್ಸ್ ಕೊಟ್ಟಿದ್ದರೆ ಅದನ್ನು ಖರ್ಚು ಮಾಡಿಕೊಂಡು ಈ ಕೆಲಸವನ್ನು ಮಾಡಬಹುದು.